**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.**

ಸಿ.ಸಿ. ನಂ. 67/2023

ಪಿ.ಡಬ್ಲ್ಯೂಃ1

ಸಿ.ಡಬ್ಲ್ಯೂ-1

ಸಾಕ್ಷಿದಾರರ ಹೆಸರು : ಗುರುನಾಥ ಮಲ್ಲಪ್ಪ ಈಟಿ

ತಂದೆಯ ಹೆಸರು : ಮಲ್ಲಪ್ಪ ಈಟಿ

ವಯಸ್ಸು : 35 ವರ್ಷ

ಉದ್ಯೋಗ : ಉಪ ವಲಯ ಅರಣ್ಯಾಧಿಕಾರಿ

ವಾಸ : ಹಳವಳ್ಳಿ

ದಿನಾಂಕಃ 15-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿಪಿ ರವರಿಂದ**

1. ನಾನು 2012 ರಿಂದ ಇಲ್ಲಿಯತನಕ ಹಳವಳ್ಳಿ ಶಾಖೆಯಲ್ಲಿ ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಾ ಬಂದಿದ್ದೇನೆ . ಕಮ್ಮಾಣಿ ಗಸ್ತು ಹಳವಳ್ಳಿ ಶಾಖೆಯ ಪರಿಧಿಗೆ ಬರುತ್ತದೆ. ದಿನಾಕಃ 05-01-2022 ರಂದು ನಾನು ಹಾಗೂ ಚಾಸಾ-4 ಹಳವಳ್ಳಿ ಗ್ರಾಮ ಅರಣ್ಯ ಪ್ರದೇಶದಲ್ಲಿ ಮಧ್ಯಾಹ್ನ 12-30 ರ ಸಮಯದಲ್ಲಿ ಗಸ್ತು ಮಾಡುತ್ತಿದ್ದಾಗ, ಕಮ್ಮಾಣಿ ಗ್ರಾಮದ ಮದ್ದಣ ಮನೆ ನಾಲಾದಲ್ಲಿ ಯಾರೋ ಕಾಡು ಪ್ರಾಣಿಯನ್ನು ಬೇಟೆಯಾಡಿ ಸಾಯಿಸಿರುವುದರ ಬಗ್ಗೆ ಖಚಿತ ಮಾಹಿತಿ ನನಗೆ ಬಂದಿರುತ್ತದೆ. ಸ್ಥಳೀಯವಾಗಿ ಲಭ್ಯವಿದ್ದ ಚಾಸಾ-2 ಮತ್ತು ಚಾಸಾ-3 ರವರಿಗೆ ಸದ್ರಿ ಮಾಹಿತಿಯನ್ನು ತಿಳಿಸಿ, ಪಂಚರಾಗಿ ಸಹಕರಿಸಲು ಕೋರಿದಾಗ, ಅವರು ಒಪ್ಪಿಕೊಂಡಿರುತ್ತಾರೆ.

2. ಸ್ಥದ್ರಿ  ಮದ್ದಣ ಮನೆ ನಾಲಾದ ಬಳಿ ಹೋದಾಗ ಯಾರೊ 4 ಜನರು ಸತ್ತಿರುವ ಪ್ರಾಣಿಯನ್ನು ತುಳಿಯುತ್ತಿರುವುದು ಕಂಡು ಬಂತು.  ನಾನು ಹಾಗೂ ಚಾಸಾ-4 ರವರು  ಸ್ಥದ್ರಿ 4 ಜನರನ್ನು ಅಟಕಾಯಿಸಿ ಹಿಡಿಯಲು ಪ್ರಯತ್ನಿಸಿದಾಗ, ಇಬ್ಬರು ಓಡಿ ಹೋಗಿ ತಪ್ಪಿಸಿಕೊಂಡರು ಹಾಗೂ ಇಬ್ಬರನ್ನು ಹಿಡಿದೆವು. ಆ ಹಿಡಿದುಕೊಂಡ ಇಬ್ಬರನ್ನು ವಿಚಾರಿಸಿದಾಗ, ಒಬ್ಬರ ಹೆಸರು ಸಾನು ಮೋಹನ ಸಿದ್ದಿ ಹಾಗೂ ಇನ್ನೊಬ್ಬರು ಕಮಲಾಕರ ಸಾನು ಸಿದ್ದಿ ಎಂದು ತಿಳಿಸಿದರು.  ಓಡಿ ಹೋದವರ ಹೆಸರು ಹಳವಳ್ಳಿಯ ಗಣಪಾ ಕರಿಯಾ ಸಿದ್ದಿ ಹಾಗೂ ಅಶೋಕ ಕೃಷ್ಣಾ  ನಾಯ್ಕ ಎಂದು ತಿಳಿಸಿದರು.  ಓಡಿ ಹೋದವರು ಕೂಡ ಆ ಇಬ್ಬರು ಎಂದು ನಾನು ಆ ಶಾಖೆಯಲ್ಲಿ ಸುಮಾರು ವರ್ಷಗಳಿಂದ ಕರ್ತವ್ಯ ಮಾಡುತ್ತಿರುವುದರಿಂದ ಮನವರಿಕೆಯಾಯಿತು.

3. ಆ ಸ್ಥಳವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಆ ಸತ್ತು ಬಿದ್ದಿದ್ದ ಪ್ರಾಣಿ ಗಂಡು ಕಾಡು ಹಂದಿ ಎಂದು ತಿಳಿದು ಬಂದಿತು. ಅದನ್ನು  ಸುಟ್ಟು ತೊಳೆದಿರುವುದು ನನಗೆ ಗೊತ್ತಾಯಿತು. ಸ್ಥದ್ರಿ 1 ನೇ ಆರೋಪಿ ಸಾನು ಮೋಹನ ಸಿದ್ದಿಯನ್ನು ವಿಚಾರಿಸಿದಾಗ, ತನ್ನ ತೋಟದ ಬೆಳೆಗಳನ್ನು ಕಾಡು ಹಂದಿ ನಾಶ ಮಾಡುತ್ತಿತ್ತು, ಅದರಿಂದ  ಬೇಸತ್ತು  ಸಮೀಪದಲ್ಲಿರುವ ವಿದ್ಯುತ್ ಲೈನ್ ದಿಂದ ತೋಟ ಮತ್ತು ಅರಣ್ಯದ ಗಡಿಗೆ ತೋಟದ  ರಕ್ಷಣೆಗೆ ಹಾಕಿದ  ಬೇಲಿಗೆ  ಅಳವಡಿಸಿದ ಐಬೆಕ್ಸ್  ಬೇಲಿಗೆ ವಿದ್ಯುತ್ ಹಾಯಿಸಿ ಸದರಿ ಕಾಡು ಹಂದಿಯನ್ನು ಸಾಯಿಸಿರುವುದು ಎಂದು ಒಪ್ಪಿಕೊಂಡಿರುತ್ತಾರೆ.  ಸ್ಥದ್ರಿ ಬೇಲಿಯನ್ನು ತೋರಿಸಲು ಹೇಳಿದಾಗ, ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದರು. ಅಲ್ಲಿ ನೋಡಿದಾಗ, ಕಾಡು ಹಂದಿ ವಿದ್ಯುತ್ ಸ್ಪರ್ಶವಾಗಿ ಒದ್ದಾಡಿರುವುದು ಸ್ಥಳದಲ್ಲಿ ಮಣ್ಣಿನ ಗುರುತಿನಲ್ಲಿ ಕಂಡು ಬಂದಿತು.  1 ನೇ

ಆರೋಪಿ ಮುಂದುವರೆದು 3 ಮತ್ತು 4 ನೇ ಆರೋಪಿಯನ್ನು ಸದ್ರಿ ಕಾಡು ಹಂದಿಯಿಂದ ಮಾಂಸ ತಯಾರಿಸಲು ಕರೆಸಿಕೊಂಡಿರುವುದಾಗಿ ತಿಳಿಸಿದರು. ಆಗ 2 ನೇ ಆರೋಪಿ ಕೂಡ ಆ ಸ್ಥಳದಲ್ಲಿ ಇದ್ದರು.

ಆ ರೀತಿ ವಿದ್ಯುತ್ ಸ್ಪರ್ಶವಾಗಿ ಸತ್ತು ಬಿದ್ದ ಆ ಕಾಡು ಹಂದಿಯನ್ನು 4 ಆರೋಪಿಗಳು 1 ನೇ ಆರೋಪಿಯ ತೋಟದ ಪಕ್ಕದಲ್ಲಿರುವ ಮದ್ದಣ ಮನೆ ನಾಲಕ್ಕೆ ತೆಗೆದು ಕೊಂಡು ಹೋದೆವು ಎಂದು 1 ನೇ ಆರೋಪಿ ತಿಳಿಸಿದರು. ಆ ಮದ್ದಣ ಮನೆ ನಾಲದಲ್ಲಿ ಇದ್ದ ಒಣ ಕಟ್ಟಿಗೆಯನ್ನು ಸಂಗ್ರಹಿಸಿ ಆ ಕಾಡು ಹಂದಿಯನ್ನು ಸುಡಲು ಪ್ರಯತ್ನಿಸಿದರು ಎಂದು ಕೂಡ 1 ನೇ ಅರೋಪಿ ತಿಳಿಸಿದರು. ಆ ಕಾಡು ಹಂದಿಯನ್ನು ಮಾಂಸ ಮಾಡಲು ಹತ್ತಿರದ ತೋಟದಲ್ಲಿದ್ದ ಬಾಳೆಗಿಡದಿಂದ ಬಾಳೆ ಎಲೆಯನ್ನು ತಂದು ಜೋಡಿಸಿರುವುದನ್ನು 1 ನೇ ಆರೋಪಿ ತಿಳಿಸಿದರು. ಆ ನಂತರ ಸುಟ್ಟ ಕಾಡು ಹಂದಿಯನ್ನು ನೀರಿನಲ್ಲಿ ತೊಳೆಯುತ್ತಿರುವಾಗ ನಾವು ಬಂದೆವು ಎಂದು ಅವರು ತಿಳಿಸಿದರು.

4. ಅರಣ್ಯ ಗುನ್ಹೆ ಆಗಿರುವುದನ್ನು ಖಚಿತ ಪಡಿಸಿಕೊಂಡೆ. ಆ ಬಾಬ್ತು 1 ಮತ್ತು 2 ನೇ ಆರೋಪಿಗೆ ತಿಳಿಸಿದೆ. ನನ್ನ ಬಳಿ ಇದ್ದ ಟೇಪ್ ನ ಆಧಾರದಲ್ಲಿ ಕಾಡು ಹಂದಿಯ ದೇಹದ ಅಳತೆ ಮಾಡಿದೆ. ಮದ್ದಣ ಮನೆ ನಾಲದ ಜಿಪಿಎಸ್ ರೀಡಿಂಗ್ ತೆಗೆದುಕೊಂಡು ನಮೂದಿಸಿದೆ. ಸದ್ರಿ ಕಾಡು ಹಂದಿ ಹಾಗೂ 10 ಮೀಟರ್ ಉದ್ದದ ಐಬೆಕ್ಸ್ ತಂತಿಯನ್ನು ಜಪ್ತು ಪಡಿಸಿಕೊಂಡೆ. ಪಂಚನಾಮೆ ಕ್ರಮವನ್ನು ಮಧ್ಯಾಹ್ನ 1-00 ಗಂಟೆಯಿಂದ 2-00 ಗಂಟೆ 20 ನಿಮಿಷದ ತನಕ ಜರುಗಿಸಿ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಈ ಎಲ್ಲಾ ಕ್ರಮದ ಬಗ್ಗೆ ಪೋಟೊವನ್ನು ತೆಗೆಯಲಾಯಿತು. ಸದ್ರಿ ಪಂಚನಾಮೆಯನ್ನು ನೋಡುತ್ತಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. 6 ಪೋಟೊಗಳನ್ನು ನೋಡುತ್ತಿದ್ದು, ಅವುಗಳನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-2 ರಿಂದ 7 ಎಂದು ಗುರುತಿಸಲಾಯಿತು. ಆ ಬಾಬ್ತು ಸಿಡಿಯನ್ನು ಹಾಜರು

ಪಡಿಸಿದ್ದು, ಅದನ್ನು ಆರೋಪಿ ಪರ ವಕೀಲರು ತಕರಾರಿಗೆ ಒಳಪಟ್ಟು ನಿಪಿ-8 ಎಂದು ಗುರುತಿಸಲಾಯಿತು. 10 ಮೀಟರ್ ಉದ್ದದ ಐಬೆಕ್ಸ್ ತಂತಿಯನ್ನು ಹಾಜರು ಪಡಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಆ ಕಾಡು ಹಂದಿಯನ್ನು ಸ್ಥಳದಲ್ಲಿ ಬಿಟ್ಟು, ಅರಣ್ಯ ವಾಚಕರನ್ನು ಭದ್ರತೆಗಾಗಿ ನೇಮಿಸಿ, ಆರೋಪಿ 1 ಮತ್ತು 2 ರನ್ನು ಪಂಚನಾಮೆ ಮತ್ತು ಮು.ಮಾ-1 ರ ಜೊತೆ ಕರೆದುಕೊಂಡು ವಲಯ ಕಚೇರಿಗೆ ಬಂದಿರುತ್ತೇವೆ.

5. ದಸ್ತಗಿರಿ ಮಾಡಿದ ಆರೋಪಿಗಳ ಜೊತೆ ಈ ನ್ಯಾಯಾಲಯದ ಮುಂದೆ ಹಾಜರಾಗಿ ದೂರನ್ನು ಸಲ್ಲಿಸಿರುತ್ತೇನೆ .ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದ್ರಿ ಮೃತ ಕಾಡು ಹಂದಿಯನ್ನು ವಿಲೇವಾರಿ ಮಾಡಲು ಈ ನ್ಯಾಯಾಲಯದಿಂದ ಅನುಮತಿ ಪಡೆದು ಮೇಲಾಧಿಕಾರಿಗಳು ಅದನ್ನು ವಿಲೇವಾರಿ ಮಾಡಿರುತ್ತಾರೆ. ಗ್ರಾಮ ನಕಾಶೆ ಮತ್ತು ಹ್ಯಾಂಡ್ ಸ್ಕೇಚ್ ನ್ನು ನೀಡಿರುತ್ತೇನೆ . ಹ್ಯಾಂಡ್ ಸ್ಕೇಚ್ ನ್ನು ನೋಡುತ್ತಿದ್ದು, ಅದನ್ನು ನಿಪಿ-9 ಎಂದು, ಅದರಲ್ಲಿ ಸಾಕ್ಷಿ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು . ಗ್ರಾಮ ನಕಾಶೆ ನ್ನು ನೋಡುತ್ತಿದ್ದು, ಅದನ್ನು ನಿಪಿ-10 ಎಂದು, ಅದರಲ್ಲಿ ಸಾಕ್ಷಿ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು. ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿ ನಂ1 ರಿಂದ 4 ರವರನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ** ಆರೋಪಿ ಪರ ಕೋರಿಕೆ ಮೇರೆಗೆ ಮುಂದೂಡಲಾಯಿತು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.